ಸಿ.ಸಿ. ೧೭೬/೨೦೧೮

ಪಿ.ಡಬ್ಲು.-೨

ಸಾಕ್ಷಿಯನ್ನು ಇಂದು ದಿ.14.06.2023 ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಜಿ.ಬಿ. ವಕೀಲರಿಂದ**

ನಾನು ಮನೆಯಲ್ಲಿದ್ದಾಗ ನನ್ನನ್ನು ಪಂಚನಾಮೆಗೆ ಪೋಲಿಸರು ಕರೆದಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ಪೋಲಿಸರು ನನ್ನನ್ನು ಅಲ್ಲಿ ಹೊಡಪೆಟ ಆಗಿದೆ ನೀವು ಬನ್ನಿ ಎಂದು ನನ್ನನ್ನು ಕರೆದರು. ನಾನು ಪೋಲಿಸರು ಕರೆದಾಗ ಹೋದಾಗ ಅಲ್ಲಿ ನಾನು, ಚಾಸಾ-೩ ಮತ್ತು ಪೋಲಿಸರು ಇದ್ದರು. ಚಾಸಾ-೩ ರವರನ್ನು ಸಹ ಕೂಡ ಪೋಲಿಸರೇ ಕರೆಸಿರುತ್ತಾರೆ. ಚಾಸಾ-೩ ಸಹ ಕೂಡ ಪೋಲಿಸರು ಕರೆದಾಗ ಮನೆಯಲ್ಲಿ ಇದ್ದರು. ಘಟನಾ ಸ್ಥಳದಿಂದ ನಮ್ಮ ಮನೆ ಅರ್ಧ ಕಿ.ಮೀ. ಅಂತರವಿದೆ. ಪೋಲಿಸರು ನಮ್ಮ ಸಮಕ್ಷಮ ಯಾವುದೇ ಮುದ್ದೇ ಮಾಲುಗಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ. ಪಂಚನಾಮೆ ಕಾಲಕ್ಕೆ ಪೋಲಿಸರು ಭಾವಚಿತ್ರವನ್ನು ತೆಗೆದಿರುತ್ತಾರೆ. ಚಾಸಾ-೧ ನನ್ನ ಸೋದರ ಸೊಸೆಯ ಮಗಳು ಇರುತ್ತಾಳೆ. ಪೋಲಿಸರಿಗೆ ನಾನು ಪಂಚನಾಮೆ ಬರೆಯಲು ಮಾಹಿತಿ ನೀಡಿರುವುದಿಲ್ಲ. ನಾನು ಪೋಲಿಸ್ ಠಾಣೆಯಲ್ಲಿ ಸಾಕ್ಷಿಯ ಸಲುವಾಗಿ ಸಹಿ ಮಾಡಿರುತ್ತೇನೆ. ಪೋಲಿಸ್ ಠಾಣೆಯಲ್ಲಿ ನನ್ನ ಮತ್ತು ನನ್ನ ಸಹೋದರ ಸಹಿ ಪಡೆದಿರುತ್ತಾರೆ. ಪೊಲಿಸರು ಪಂಚನಾಮೆ ಕಾಲಕ್ಕೆ ಬರೆದ ಪಂಚನಾಮೆಯನ್ನು ಓದಿ ಹೇಳಿರುವುದಿಲ್ಲ ಎಂಧರೆ ಸರಿ, ಪೊಲಿಸರು ಸಹಿ ಮಾಡು ಎಂದು ಹೇಳಿದಕ್ಕೆ ಸಹಿ ಮಾಡಿರುತ್ತೇನೆ ಎಂಧರೆ ಸರಿ.

ದಿನಾಂಕ: 17.10.2017 ರಂದು ಪೋಲಿಸರು ನನ್ನನ್ನು ಮತ್ತು ಚಾಸಾ-೩ ರವರನ್ನು ಗುನ್ಹೇ ಸ್ಥಳವಾದ ಆರೋಪಿತರ ಮನೆಯಲ್ಲಿ 3 ರಿಂದ 4 ಗಂಟೆವರೆಗೆ ನಮ್ಮನ್ನು ಕರೆಯಿಸಿ ಪಂಚನಾಮೆ ಜರುಗಿಸಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ.ಸಿ. ಆಳಂದ.